# ಜೀವನ ಜೋಕಾಲಿ

**ಏನೋ ಮಾಡಬೇಕು ಅಂದುಕೊಂಡಿರುತ್ತೇವೆ. ಅದು ಏನೋ ಆಗುತ್ತೆ! ಕೆಲವೊಮ್ಮೆ ಉತ್ಸಾಹದಿಂದ ಎಲ್ಲಿಗೋ ಹೋಗಬೇಕು ಎಂದು ಸಿದ್ಧರಾಗುತ್ತೇವೆ. ಇನ್ನೇನೋ ಆಗಿ ಉತ್ಸಾಹಕ್ಕೇ ತಣ್ಣೀರು ಎರಚಿದಂತಾಗಿರುತ್ತದೆ. ನಿಮಗೂ ಈ ಅನುಭವಗಳು ಆಗಿವೆಯೇ?**

■ **ಕೆ. ಲೀಲಾ ಶ್ರೀನಿವಾಸ್**

ಜೀವನವೇ ಹಾಗೆ. ಅದು ಜೋಕಾಲಿಯಂತೆ. ಜೀಕಿದ ಕಡೆಗೆ ಸಾಗುತ್ತಾ ಇರುತ್ತದೆ. ಮನಸ್ಸಿನ ಭಾವನೆಗಳೂ, ದಿನನಿತ್ಯದ ಬದುಕಿನಲ್ಲಿ ನಡೆಯುವ ಘಟನೆಗಳೂ ಹಾಗೆಯೇ. ನಾವಂದುಕೊಂಡಂತೆ ಬಹುತೇಕ ಪ್ರಸಂಗಗಳು, ಘಟನೆಗಳು ನಡೆಯುವುದೇ ಇಲ್ಲ. ಜೋಕಾಲಿಯ ಹಾಗೆ ಜೀಕಿದ ಕಡೆಗೆ ಹೆಜ್ಜೆ ಹಾಕುತ್ತಾ ವಾಸ್ತವದೊಂದಿಗೆ ರಾಜಿ ಮಾಡಿಕೊಳ್ಳುತ್ತಾ, ಪರಸ್ಪರ ಒಪ್ಪಿತ ಮನಸ್ಸಿನಿಂದಲೇ ಜೀವನ ನಡೆಸಬೇಕಾಗಿದೆ.



ಕೆಲ ಉದಾಹರಣೆಗಳನ್ನು ಗಮನಿಸಿ.

- ಪ್ರಾಣಸ್ನೇಹಿತೆಯ ಮಗಳ ಮದುವೆಗೆ ಧಾಂಧೂಂ ಎಂದು ಹೋಗಲು ಹೊಸ ಸೀರೆ, ಕುಪ್ಪಸ, ಚಪ್ಪಲಿ, ವ್ಯಾನಿಟಿ ಬ್ಯಾಗ್, ಮ್ಯಾಚಿಂಗ್ ಸರ ಎಲ್ಲವನ್ನೂ ಸಿದ್ಧಗೊಳಿಸಿಕೊಂಡು ಕಾಯುತ್ತಿರುವಾಗ ಕೊನೆಯ ವರೆಗೂ ಅವಳು ಮದುವೆಗೆ ಕರೆಯುವುದೇ ಇಲ್ಲ.
- ಗೆಳತಿಗೆ ಸುಂದರವಾಗಿ ಕಾಣುವುದು ಹೇಗೆ ಎಂಬ ಬಗ್ಗೆ ಹಲವು ಬಾರಿ ಟಿಪ್ಸ್ ಕೊಟ್ಟಿರುತ್ತೀರಿ. ಅಪರೂಪಕ್ಕೊಮ್ಮೆ ಅವಳು ಬಂದಾಗ ನೀವು ತಲೆ ಕೂಡ ಬಾಚಿಕೊಳ್ಳದೇ ಕೆಟ್ಟ ದಿರಿಸಿನಲ್ಲಿ ಎದುರಾಗುತ್ತೀರಿ.
- 'ನಮ್ಮ ಅತ್ತಿಗೆ ಬೇಸನ್ ಉಂಡೆ ಸ್ಪೆಷಲಿಸ್ಟ್' ಎಂದು ಹೊಗಳುವ ನಾದಿನಿಯರಿಗೆ ಉಂಡೆ ತಯಾರಿಸಲು ಹೋದಾಗ ಅದು ಅಂಟಂಟಾಗಿ 'ಅಂಟಿನ ಉಂಡೆ'ಯಾಗಿರುತ್ತದೆ.
- ತಂಗಿಯ ಮದುವೆಗೆ ವಿಶೇಷವಾಗಿ ಅಲಂಕರಿಸಿಕೊಂಡು ಹೋಗಬೇಕೆಂದುಕೊಂಡಿದ್ದ ಹಿಂದಿನ ದಿನವೇ ಮೂಗಿನ ಮೇಲೆ ದೊಡ್ಡ ಮೊಡವೆ ಮೂಡಿ ಕೆಂಪಾಗಿರುತ್ತದೆ.
- ಮಸಾಲೆ ದೋಸೆ ತಿನ್ನುವ ಉತ್ಕಟ ಬಯಕೆಯಿಂದ ಹೋಟೆಲಿಗೆ ಹೋದಾಗ ಅಲ್ಲಿ ದೋಸೆ ಬಿಟ್ಟು ಎಲ್ಲಾ ತಿಂಡಿ ಸಿಗುತ್ತಿರುತ್ತದೆ.
- ಬೆಳಗಿನ ಜಾವವೇ ಮನೆ ತುಂಬಾ ಅಪರೂಪದ ಅತಿಥಿಗಳು. ಒಂದೆಡೆ ಸಂತಸ, ಒಂದೆಡೆ ದುಗುಡ. ಕಾರಣ ಅಂದೇ ಮನೆ ಕೆಲಸದವಳು ಕೈಕೊಟ್ಟಿರುತ್ತಾಳೆ.
- ಮನೆಗೆ ಬಂದ ಅತಿಥಿಗಳೆದುರು 'ನಮ್ಮ ಮಕ್ಕಳು ಸಿಹಿ ತಿನ್ನುವುದಿಲ್ಲ, ನೀವು ತಿನ್ನಿ' ಎನ್ನುವಷ್ಟರಲ್ಲಿ ನಿಮ್ಮ ಮುಂದಿನ ಕಂದಮ್ಮಗಳು ಗಬಗಬನೆ ಸಿಹಿ ತಿಂಡಿಗೆ ಕೈ ಹಾಕಿ ಬಾಯಿಗಿಡುತ್ತವೆ.
- ಟಿ.ವಿ.ಯಲ್ಲಿ ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾ ಬರುತ್ತಿದೆ. ಇನ್ನೇನು ವಿಲನ್ ಮುಖವಾಡ ತೆಗೆದರೆ ಕಳ್ಳ ಯಾರು ಅಂತ ಗೊತ್ತಾಗತ್ತೆ. ಕುತೂಹಲದಿಂದ ಟಿ.ವಿ ಮುಂದೆ ತುದಿಗಾಲಲ್ಲಿ ಕೂತಿದ್ದೀರಿ. ಥಕ್ಕನೆ ಕರೆಂಟ್ ಹೋಗುತ್ತೆ.
- ಅನಿರೀಕ್ಷಿತ ಭೇಟಿ. ಮಲೆನಾಡಿನ ಹಳ್ಳಿಯಲ್ಲಿನ ಅಕ್ಕನ ಮನೆಗೆ. ರಾತ್ರಿ 9ಕ್ಕೆ ಬರುತ್ತೀರಿ. ಬಸ್‌ನವರು ಎಲ್ಲಿಯೂ ನಿಲ್ಲಿಸದೇ ಬಂದುದರಿಂದ ಹೊಟ್ಟೆಗೆ ಏನೂ ಬಿದ್ದಿಲ್ಲ. ಅಲ್ಲಿ ಎದುರಾಗಿದ್ದೇನು? ಅಕ್ಕನ ಮನೆ ಬಾಗಿಲಿಗೆ ಬೀಗ.
- 'ನಮ್ಮ ಮನೆಯಲ್ಲಿ 24 ತಾಸೂ ಫ್ರಿಜ್‌ನಲ್ಲಿ ಹಾಲು ಸ್ಟಾಕ್ ಇಟ್ಟಿರ್ತೀವಿ' ಎಂದು ಕೊಚ್ಚಿಕೊಂಡ ಮರುದಿನವೇ ಆ ಗೆಳತಿ ಮಗುವಿಗೆ ಕೊಂಚ ಹಾಲು ಕೇಳಲು ಬಂದಾಗ ಫ್ರಿಜ್‌ನಲ್ಲಿ ಹಾಲು ಇರುವುದಿಲ್ಲ.
- ಬೆಂಗಳೂರಿಗೆ ಹೋಗಲು ಜನ ಜಂಗುಳಿಯಲ್ಲಿ 2 ಲಗೇಜುಗಳೊಂದಿಗೆ ಹೋರಾಡಿ ಹತ್ತಿ ಅಂತೂ ಇಂತು ಸೀಟು ಗಿಟ್ಟಿಸಿ 'ಉಸ್ಸಪ್ಪಾ' ಎಂದು ಕಂಡಕ್ಟರನಿಗೆ ಬೆಂಗಳೂರಿಗೆ ಟಿಕೆಟ್ ಕೇಳಿದಾಗ ಅವನು ಹೇಳುತ್ತಾನೆ: 'ಇದು ಮಂಗಳೂರಿಗೆ ಹೋಗುವ ಬಸ್ಸು!
- ಗೆಳೆಯರಿಬ್ಬರು ಮರುದಿನ ಕಾಲೇಜು ರಜಾ ಎಂಬ ಬಗ್ಗೆ ಮೊಬೈಲ್‌ನಲ್ಲಿ ಮಾತನಾಡುತ್ತಿರುತ್ತಾರೆ. ಆಗಲೇ 'ಟುಮಾರೊ ನೋ ಹಾಲಿಡೆ' ಎಂಬ ಗ್ರೂಪ್ ಮೆಸೇಜ್ ಬರುತ್ತದೆ! ■

